**ಸಾಕ್ಷಿಯನ್ನು ದಿಃ 22.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸ್ ದಾಖಲೆಗಳನ್ನು ಓದಿ ನೋಡಿ ತಿಳಿದುಕೊಂಡಿರುತ್ತೇನೆ. ಪ್ರ.ವ.ವರದಿಯನ್ನು ಕಾರು ಚಾಲಕನ ತಪ್ಪಿದೆ ಎಂದು ಕಾರು ಚಾಲಕನ ಮೇಲೆ ಹೂಡಿದ್ದಾರೆ ಎಂದರೆ ಸರಿ. ಆದರೆ ಅದರಲ್ಲಿ ತಪ್ಪಿದೆ ಎನ್ನುತ್ತಾರೆ. ದೋಷರೋಪಣಾ ಪಟ್ಟಿಯನ್ನು ಸಹ ಕಾರು ಚಾಲಕನ ತಪ್ಪಿದೆ ಎಂದು ಆತನ ಮೇಲೆಯೇ ಸಲ್ಲಿದ್ದಾರೆ ಎಂದರೆ ಸರಿಯಾಗಿ ತನಿಖೆ ಮಾಡದೇ ತಪ್ಪಾಗಿ ಸಲ್ಲಿಸಿದ್ದಾರೆ ಎನ್ನುತ್ತಾರೆ. ದೋಷರೋಪಣಾ ಪಟ್ಟಿಯನ್ನು ತಪ್ಪಾಗಿ ಸಲ್ಲಿಸಿದ್ದೀರಾ ಎಂದರೆ ಪ್ರಶ್ನಿಸಿದ್ದಾರೆ ಎಂದರೆ ನಾವು 3 ನೇ ವ್ಯಕ್ತಿಯಾದ ಕಾರಣ ಪ್ರಶ್ನಿಸಲು ಬರುವುದಿಲ್ಲ ಎನ್ನುತ್ತಾರೆ. ಇನ್ಸೂರ್ಡ್ ಮುಖಾಂತರ ದೋಷರೋಪಣಾ ಪಟ್ಟಿಯನ್ನು ಮೇಲ್ಮನವಿ ಮುಖಾಂತರ ಪ್ರಶ್ನಿಸಲು ಪ್ರಯತ್ನಿಸಿದ್ದೀರಾ ಎಂದರೆ ಅದನ್ನು ನಾವು ಹೇಳಲು ಬರುವುದಿಲ್ಲ ಎನ್ನುತ್ತಾರೆ. ಕಾರು ಚಾಲಕನ ತಪ್ಪಿಲ್ಲದೇ ಇದಿದ್ದರೇ ನಾವು ಪ್ರಶ್ನಿಸುತ್ತಿದ್ದೇವು ಎಂದರೆ ಸರಿಯಲ್ಲ. ಅರ್ಜಿದಾರರು ರಸ್ತೆಯ ಎಡಭಾಗದಲ್ಲಿ ನಿಂತಿದ್ದ ಕಾರು ಚಾಲಕ ಅಜಾಗರೂಕತೆಯಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಜಂಕ್ಷನ್ ನಲ್ಲಿ ಆಗಿದೆ ಎನ್ನುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ತಪ್ಪಿನಿಂದ ಅಪಘಾತ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.